■ ಶಶಿಕುಮಾರ್ ಸಿ.

# ಫುಲ್ ಚಾರ್ಜ್‌ಗೆ ನಾಲ್ಕೇ ನಿಮಿಷ ಸಾಕು



ಚೀನಾ ಮೂಲದ ರಿಯಲ್‌ಮಿ ಮೊಬೈಲ್ ತಯಾರಕಾ ಕಂಪನಿಯು ಮೊಬೈಲ್ ಚಾರ್ಜಿಂಗ್ ಬಗ್ಗೆ ಈಚೆಗೆ ವಿಡಿಯೊವೊಂದನ್ನು ಹಂಚಿಕೊಂಡಿದ್ದು, ಅದು ಸ್ಮಾರ್ಟ್‌ಫೋನ್ ಕ್ಷೇತ್ರದಲ್ಲಿ ಹೊಸ ಸಂಚಲನ ಸೃಷ್ಟಿಸಿದೆ. ನಾಲ್ಕೇ ನಿಮಿಷ, ಬರೀ ನಾಲ್ಕೇ ನಿಮಿಷದಲ್ಲಿ ಸ್ಮಾರ್ಟ್‌ಫೋನ್ ಶೂನ್ಯದಿಂದ ಪೂರ್ಣ ಚಾರ್ಜಿಂಗ್ ಆಗುವ ಹೊಸ ಬ್ಯಾಟರಿ ತಂತ್ರಜ್ಞಾನದ ಬಗ್ಗೆ ಒಳಗೊಂಡಿದ್ದ ಆ ವಿಡಿಯೊ ಈಗ ಮೊಬೈಲ್ ಮಾರುಕಟ್ಟೆಯಲ್ಲಿ ಸಂಚಲನ ಸೃಷ್ಟಿಸಿದೆ.

320 ವ್ಯಾಟ್ ಚಾರ್ಜಿಂಗ್ ತಂತ್ರಜ್ಞಾನ ಅಭಿವೃದ್ಧಿಪಡಿಸಿರುವ ರಿಯಲ್‌ಮಿಯು ಅದಕ್ಕೆ ಸಹಕರಿಸುವ ಚಾರ್ಜರ್ ಅನ್ನು ಶೀಘ್ರವೇ ಬಿಡುಗಡೆ ಮಾಡಲಿದೆ ಎನ್ನಲಾಗಿದ್ದು, ಇದು ಸಾಧ್ಯವೇ ಆದಲ್ಲಿ ಕಂಪನಿಗೆ ದೊಡ್ಡಮಟ್ಟದ ಯಶಸ್ಸೇ ಸಿಕ್ಕಂತಾಗಲಿದೆ.

ಈಚೆಗಿನ ಕೆಲ ವರ್ಷಗಳಿಂದ ಸ್ಮಾರ್ಟ್‌ಫೋನ್ ಮಾರುಕಟ್ಟೆಯಲ್ಲಿ ಎಲ್ಲ ಮೊಬೈಲ್ ತಯಾರಕಾ ಕಂಪನಿಗಳು ಬ್ಯಾಟರಿಗೆ ಸಂಬಂಧಿಸಿದ ಹೊಸ ಹೊಸ ಪ್ರಯತ್ನಗಳನ್ನು ಮಾಡುತ್ತಲೇ ಬಂದಿವೆ. ಅದರ ಮುಂದುವರೆದ ಭಾಗವಾಗಿ ರಿಯಲ್‌ಮಿ ಭವಿಷ್ಯದಲ್ಲಿ ತಾನು ಮಾರುಕಟ್ಟೆಗೆ ಬಿಡುಗಡೆ ಮಾಡಲಿರುವ ಎಲ್ಲ ಸ್ಮಾರ್ಟ್‌ಫೋನ್‌ಗಳಲ್ಲಿ 320 ವ್ಯಾಟ್ ಚಾರ್ಜಿಂಗ್ ತಂತ್ರಜ್ಞಾನವನ್ನು ಅಳವಡಿಸಲಿದೆ ಎನ್ನಲಾಗಿದೆ.

### ಇದು ಹೇಗೆ ಕೆಲಸ ಮಾಡುತ್ತದೆ?

ತನ್ನ ಗುಣಮಟ್ಟದ ಚಾರ್ಜರ್‌ಗಳಲ್ಲಿ ಅತ್ಯಾಧುನಿಕ ಚಾರ್ಜಿಂಗ್ ತಂತ್ರಜ್ಞಾನಗಳನ್ನು ಕಾಲಕಾಲಕ್ಕೆ ಅಳವಡಿಸಿಕೊಳ್ಳುವುದರ ಮೂಲಕ ಗಮನ ಸೆಳೆದಿರುವ ರಿಯಲ್‌ಮಿ, ವೇಗವಾಗಿ ಚಾರ್ಜಿಂಗ್ ಆಗುವಂತೆ ನೋಡಿಕೊಳ್ಳುತ್ತಿತ್ತು. ಹಳೆಯ ಮಾದರಿಯ ಚಾರ್ಜರ್‌ಗಳ ಗಾತ್ರದಲ್ಲೇ ಹೊಸ ತಂತ್ರಜ್ಞಾನ ಒಳಗೊಂಡ ಎರಡು USB–C ಪೋರ್ಟ್‌ಗಳ ಚಾರ್ಜರ್ ಬಿಡುಗಡೆ ಮಾಡಲಿದೆ. ಈ ಪೈಕಿ ಒಂದು ಪೋರ್ಟ್‌ನಲ್ಲಿ ರಿಯಲ್‌ಮಿ ಫೋನ್‌ಗಳನ್ನು ಚಾರ್ಜ್ ಮಾಡಬಹುದಾದರೆ ಮತ್ತೊಂದರಲ್ಲಿ ಲ್ಯಾಪ್‌ಟಾಪ್‌ಗಳು ಅಥವಾ ಇತರ ಗ್ಯಾಜೆಟ್‌ಗಳನ್ನು ಚಾರ್ಜ್ ಮಾಡಬಹುದಾಗಿದೆ. ■

# ರೂಪಾಯಿ ಚಿಹ್ನೆ ಯಾಕಿಲ್ಲ?

ಕಂಪ್ಯೂಟರ್ ಎನ್ನುವುದು ದೈನಂದಿನ ಬದುಕಿನ ಭಾಗವಾಗಿದ್ದು, ಈ ಕಂಪ್ಯೂಟರ್‌ನಲ್ಲಿ ಕೀಬೋರ್ಡ್ ಮುಖ್ಯ ಪಾತ್ರವಹಿಸುತ್ತದೆ. ಪ್ರಾದೇಶಿಕತೆಗೆ ತಕ್ಕಂತೆ ಕಂಪ್ಯೂಟರ್‌ನಲ್ಲಿ ಭಾಷೆಯಿಂದಿಡಿದು ಎಲ್ಲ ರೀತಿಯ ಬದಲಾವಣೆಗಳನ್ನು ತರಲಾಗಿದ್ದು, ಕೀಬೋರ್ಡ್‌ನಲ್ಲಿ ಮಾತ್ರ ಒಂದು ಸಿಂಬಲ್ ಹಾಗೆಯೇ ಉಳಿದುಕೊಂಡಿದೆ. ಈ ಬಗ್ಗೆ ಓಲಾ ಕಂಪನಿಯ ಮುಖ್ಯ ಕಾರ್ಯನಿರ್ವಹಾಕ ಅಧಿಕಾರಿ ಭವಿಶ್ ಅಗರ್ವಾಲ್ ಪ್ರಶ್ನೆ ಎತ್ತಿದ್ದಾರೆ.

ಭಾರತದಲ್ಲಿ ಲಭ್ಯವಿರುವ ಅಥವಾ ಮಾರಾಟವಾಗುವ ಕಂಪ್ಯೂಟರ್ ಮತ್ತು ಲ್ಯಾಪ್‌ಟಾಪ್‌ಗಳ ಕೀಬೋರ್ಡ್‌ನಲ್ಲಿ ಡಾಲರ್ ಸಿಂಬಲ್ ಹಾಗೆಯೇ ಉಳಿದುಕೊಂಡಿದ್ದು, ಅದನ್ನು ಒತ್ತಿದರೆ ರೂಪಿ ಅಥವಾ ರೂಪಾಯಿ ಚಿಹ್ನೆಯು ಕಂಪ್ಯೂಟರ್‌ನ ಪರದೆ ಮೇಲೆ ಕಾಣುತ್ತಿದೆ. ಈ ಬಗ್ಗೆ ಅಪಸ್ವರ ಎತ್ತಿರುವ ಭವಿಶ್, 'ಭಾರತದಲ್ಲಿ ಮಾರಾಟವಾಗುವ ಕಂಪ್ಯೂಟರ್ ಮತ್ತು ಲ್ಯಾಪ್‌ಟಾಪ್‌ನ ಕೀಬೋರ್ಡ್‌ನಲ್ಲಿರುವ ಡಾಲರ್ ಚಿಹ್ನೆಯ ಬದಲಿಗೆ ರುಪಿ ಚಿಹ್ನೆಯನ್ನು ಅಳವಡಿಸಬೇಕು' ಎಂದು ಸಲಹೆ ನೀಡಿದ್ದಾರೆ.

ಈ ಬಗ್ಗೆ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು, 'ಬೇರೆ ದೇಶಗಳಲ್ಲಿ ಮಾರಾಟವಾಗುವ ಕೀಬೋರ್ಡ್‌ನಲ್ಲಿ ಆಯಾ ದೇಶಗಳ ಕರೆನ್ಸಿಗಳ ಚಿಹ್ನೆ ಇರುತ್ತದೆ. ಆದರೆ ಭಾರತದಲ್ಲಿ ಮಾತ್ರ ಡಾಲರ್ ಚಿಹ್ನೆ ಇರುವುದು ಆಶ್ಚರ್ಯ. ಅದನ್ನು ರುಪಿ ಚಿಹ್ನೆಯಾಗಿ ಬದಲಾವಣೆ ಮಾಡಬೇಕು' ಎಂದಿದ್ದಾರೆ. ಜೊತೆಗೆ ಬೇರೆ ಬೇರೆ ದೇಶಗಳಲ್ಲಿ ಆಯಾ ದೇಶಕ್ಕೆ ತಕ್ಕಂತೆ ಕೀಬೋರ್ಡ್ ಚಿಹ್ನೆಗಳನ್ನು ಅಳವಡಿಸಿರುವ ಫೋಟೊ ಸಹ ಹಂಚಿಕೊಂಡಿದ್ದಾರೆ. ■

# ಟೆಲಿಗ್ರಾಂ ನಿಷೇಧ!

ಪಾವೆಲ್ ಡುರೋವ್ ಬಂಧನದಿಂದ ಸಂಕಷ್ಟಕ್ಕೆ ಸಿಲುಕಿದ್ದ ಟೆಲಿಗ್ರಾಂಗೆ ಭಾರತದಿಂದಲೂ ಮತ್ತೊಂದು ಸಂಕಷ್ಟ ಎದುರಾಗುವ ಸಂಭವವಿದೆ. ಪಾವೆಲ್ ಡುರೋವ್ ಟೆಲಿಗ್ರಾಂನ ಸಂಸ್ಥಾಪಕ ಮತ್ತು ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ.

ತನ್ನ ವೇದಿಕೆಯಲ್ಲಿ ನಡೆಯುತ್ತಿರುವ ಅಪರಾಧ ಅಥವಾ ಕಾನೂನು ಬಾಹಿರ ಚಟುವಟಿಕೆಗಳನ್ನು ನಿಯಂತ್ರಿಸಲು ವಿಫಲರಾದ ಆರೋಪದಡಿ ಅವರನ್ನು ಈಚೆಗೆ ಬಂಧಿಸಲಾಗಿದೆ. ಈ ಬೆನ್ನಲ್ಲೇ ಭಾರತದಲ್ಲೂ ಆ್ಯಪ್ ನಿಷೇಧಕ್ಕೊಳಗಾಗುವ ಸಾಧ್ಯತೆ ಇದೆ.

ಟೆಲಿಗ್ರಾಂ ವೇದಿಕೆಯು ಸುಲಿಗೆ ಮತ್ತು ಜೂಜಾಟ ಹೀಗೆ ಇತ್ಯಾದಿ ಅಪರಾಧ ಚಟುವಟಿಕೆಗಳನ್ನು ಒಳಗೊಂಡಿದ್ದು ಈ ಬಗ್ಗೆ ತನಿಖೆಗೆ ಕೇಂದ್ರ ಸರ್ಕಾರ ಮುಂದಾಗಲಿದೆ ಎಂದು ಸರ್ಕಾರಿ ಅಧಿಕಾರಿಯೊಬ್ಬರು ಹೇಳಿದ್ದಾರೆ. ಅಪರಾಧ ಕೃತ್ಯಗಳಿಗೆ ಟೆಲಿಗ್ರಾಂ ವೇದಿಕೆಯಾಗಿದೆಯೇ ಎಂದು ತಿಳಿಯಲು ತನಿಖೆ ನಡೆಯಲಿದ್ದು, ಇದು ದೃಢವಾದರೆ ಆ್ಯಪ್ ನಿಷೇಧಗೊಳ್ಳಲಿದೆ. ■